ಸುಪಾರು ೫೮ಲಕ್ಷ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ, ಇನ್ನೂ ೨೦ಲಕ್ಷ ರೂಪಾಯಿಗಳನ್ನು ಆದರೂ ಸಹ ನಾವು ಕಲೆಕ್ಟ್ ಮಾಡಬೇಕಾಗಿದೆ. ಕೇಂದ್ರದವರಿಂದ ಲೈಸೆನ್ಸ್ ಬಂದ ತಕ್ಷಣ ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

Value of Inventory in Vanivilas Sugar Factory Hiriyur

168. SRI K.H. RANGANATH (Hiriyur).—Will the Minister for Co-operation be pleased tc State:—

a) The value of the inventory both in Vanivilas Sugar Factory, Hiriyur and in the distillery since the commissioning and also the value of the unsued inventory? (year wise figures to be furnished).

b) Who are the official directors on the board and whether they are attending the meetings of the Board regularly?

c) The Government's share capital in the factory and the amount for which the Government guarantee is given?

SRI R.L. JALAPPA (Minister for Co-operation).—

a) (i) The yearwise inventory for Vanivilas Co-operative Sugar Factory Hiriyur as follows:

Year	Value (Rs. in lakhs)
1972-73	6.14
1973-74	19.74
1974-75	39.55
1975-76	40.82
1976-77	35.45
1977-78	39.33
1978-79	39.11
1979-80	43.96
1980-81	61.88
Total	285.98

(ii) Unused materials relating to past five years — Rs. 6.68 lakhs (yearwise figures are not available)

(iii) There is no inventory for distillery since the distillery has been leased out w.e.f. 12-2-1981.

b) The following officers are the official directors on the Board of Management:

1) The Managing Director of the Factory.
2 Deputy Commissioner Chitradurga Dist.
3) Joint Registrar of Co-operative Societies, Bangalore Division.

Except the Managing Director, the remaining two official Directors are not attending the meetings of the Board regularly due to official pre-occupation.

c) Government share Capital contribution in the factory. } Rs. 49.00 lakhs.

Amount of loan raised from the institutions for which Government guarantee is given:

a) IFCI Rs. 85.00 lakhs.
b) LICI Rs. 35.00 lakhs.
c) Apex Bank Rs. 20.00 lakhs.

ಶ್ರೀ ಕೆ.ಎಚ್. ರಂಗನಾಥ್.—ಸ್ವಾಮಿ ವಾಣಿವಿಲಾಸ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವುದಕ್ಕೆ ಪ್ರಾರಂಭ ಮಾಡಿದಂಥ ವರ್ಷ ಯಾವುದು?

ಶ್ರೀ ಆರ್.ಎಲ್. ಜಾಲಪ್ಪ.—೧೯೭೨–೭೩ನೇ ಇಸವಿಯಿಂದು ದಾಖಲೆಗಳಿಂದ ಗೊತ್ತಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್.—೧೯೭೨–೭೩ರಿಂದ ೧೯೮೦–೮೧ರವರೆಗೆ ಇನ್‌ವೆಂಟರಿ ವರ್ಷ ವರ್ಷ ಜಾಸ್ತಿಯಾಗುತ್ತಾ ಬಂದು ಅದು ಒಟ್ಟು ೨,೮೫,೯೮ ರೂಪಾಯಿಗಳು ಎಂದು ಹೇಳಿದ್ದೀರಿ. ಇನ್‌ವೆಂಟರಿಯಲ್ಲಿ ಕಾರ್ಖಾನೆಯವರು ಏನೇನು ಕೊಂಡುಕೊಂಡರು ಎಂದು ವಿವರಗಳನ್ನು ಹೇಳಲಿಕ್ಕೆ ಸಾಧ್ಯವೇ?

ಶ್ರೀ ಆರ್.ಎಲ್. ಜಾಲಪ್ಪ.—ಆ ವಿವರಗಳು ಇಲ್ಲ, ಬೇಕಾದರೆ ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ. ಇನ್‌ವೆಂಟರಿ, ಬೆಲೆಗಳು ಜಾಸ್ತಿಯಾಗಿರುವುದಕ್ಕೆ.

ಶ್ರೀ ಕೆ.ಎಚ್. ರಂಗನಾಥ್.—ಇನ್‌ವೆಂಟರಿ ೭೯–೮೦ರಲ್ಲಿ ೪೩ಲಕ್ಷ ರೂಪಾಯಿಗಳು ೮೦–೮೧ರಲ್ಲಿ ೬೧ ಲಕ್ಷ ರೂಪಾಯಿಗಳು ಎಂದು ಹೇಳಲಾಗಿದೆ. ಇಷ್ಟು ಇನ್‌ವೆಂಟರಿ ಆಗಬೇಕಾದರೆ ಅಲ್ಲಿ ಸರಿಯಾದ ವ್ಯವಸ್ಥೆಯಿಲ್ಲ ಎಂದು ನಾವು ಭಾವಿಸೋಣವೇ?

ಶ್ರೀ ಆರ್.ಎಲ್. ಜಾಲಪ್ಪ.—ಅಲ್ಲಿ ಸರಿಯಾದ ವ್ಯವಸ್ಥೆ ಇದೆ. ಆದರೆ ವರ್ಷ ವರ್ಷ ಸಾಮಾನುಗಳ ಬೆಲೆಗಳು ಜಾಸ್ತಿಯಾಗಿರುವುದರಿಂದ ಇನ್‌ವೆಂಟರಿಯೂ ಜಾಸ್ತಿಯಾಗಿರುತ್ತದೆ. ಉದಾಹರಣೆಗೆ, ೭೯–೮೦ರಲ್ಲಿ ೪೩ ಲಕ್ಷ ರೂಪಾಯಿಗಳು ಇಲ್ಲಿ ಆಗಿದೆ, ೮೦–೮೧ರಲ್ಲಿ ೬೨ಲಕ್ಷ ರೂಪಾಯಿಗಳಾಗಿದೆ. ಟರ್ಬೈನ್ ಮುಂತಾದ ಸಾಮಾನುಗಳನ್ನು ಇವರು ಹೊರಗಡೆಯಿಂದ ತರಿಸಬೇಕಾಗಿರುತ್ತದೆ. ಇದಕ್ಕೆ ಒಂದು ಕಡೆ ಐದು ಲಕ್ಷ ರೂಪಾಯಿಗಳಿದ್ದರೆ ಇನ್ನೊಂದು ಕಡೆ ಜಾಸ್ತಿ ಇರುತ್ತದೆ. ಮಾನ್ಯ ಸದಸ್ಯರಿಗೆ ಬೇರೆ ವಿವರಗಳೂ ಬೇಕಾದರೆ ನಮಗೆ ಸಮಯವನ್ನು ಕೊಟ್ಟರೆ ತರಿಸಿಕೊಡುತ್ತೇವೆ.

ಶ್ರೀ ಕೆ.ಎಚ್. ರಂಗನಾಥ್.—ಈ ಕಾರ್ಖಾನೆ ಕಮಿಷನ್ ಆಗುವವರೆಗೆ ಒಟ್ಟು ಹಣ ಎಷ್ಟು ವೆಚ್ಚಾಯಿತು?

ಶ್ರೀ ಆರ್.ಎಲ್. ಜಾಲಪ್ಪ.—ಆ ವಿವರ ನನ್ನಲ್ಲಿಲ್ಲ, ತರಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ಈ ಸಕ್ಕರೆ ಕಾರ್ಖಾನೆಯಲ್ಲಿ ಸ್ಪೇರ್ ಪಾರ್ಟ್ಸ್ ಕೊಳ್ಳುವುದಕ್ಕೆ ಪ್ರಾರಂಭ ಮಾಡಿದ ವರ್ಷದಿಂದ ೨೧ರವರೆಗೆ ೨೮೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಪ್ರಾರಂಭ ಮಾಡಿದ ವರ್ಷವೇ ೬.೧೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದರೆ ಇದರ ತೀವ್ರತೆಯನ್ನು ತಾವು ಅರ್ಥಮಾಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳು, ಜಂಟಿ ನಿರ್ದೇಶಕರು ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಾಗದೆ ಇರುವುದಕ್ಕೆ ಪೂರ್ವನಿಯೋಜಿತ ಕಾರ್ಯ ಎಂದು ಹೇಳಿದ್ದಾರೆ, ಸರ್ಕಾರದವರು ಇವರಿಗೆ ೮೫ ಲಕ್ಷ ರೂಪಾಯಿಗಳ ಷೇರು ಬಂಡವಾಳವನ್ನು ಕೊಟ್ಟಿದ್ದಾರೆ, ೩೫ ಲಕ್ಷ ರೂಪಾಯಿಗಳ ಗ್ಯಾರಂಟಿಯನ್ನು ಕೊಟ್ಟಿದ್ದಾರೆ, ಇಷ್ಟು ಸರ್ಕಾರದ ಹಣ ಇರುವಾಗ ಅಧಿಕಾರಿಗಳು ಸಭೆಗೆ ಹೋಗದೆ ಇರುವುದಕ್ಕೆ ಏನಾದರೂ ಆತಂಕವಾಯಿತು ಎಂದು ಭಾವಿಸೋಣವೇ?

ಶ್ರೀ ಆರ್. ಎಲ್. ಜಾಲಪ್ಪ.—ಐ.ಎಫ್.ಸಿ. ಯವರು ೮೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಲ್ಲಿ ಇನ್ನು ಇವರು ೯ ಲಕ್ಷ ರೂಪಾಯಿಗಳ ಬಾಕಿಯನ್ನು ಕೊಡಬೇಕು, ಮಿಕ್ಕಿದ ಹಣವನ್ನು ಇವರು ತೀರಿಸಿದ್ದಾರೆ, ಎಲ್.ಐ.ಸಿಯವರ ೩೫ ಲಕ್ಷ ರೂಪಾಯಿಗಳ ಹಣದಲ್ಲಿ ಕೇವಲ ಎರಡು ಲಕ್ಷ ರೂಪಾಯಿಗಳು ಮಾತ್ರ ಕೊಡಬೇಕಾಗಿದೆ, ೨೦ ಲಕ್ಷ ರೂಪಾಯಿಗಳನ್ನು ಅಪೆಕ್ಸ್ ಬ್ಯಾಂಕ್‌ನಿಂದ ತೆಗೆದುಕೊಂಡಿದ್ದಾರೆ. ಕೇನ್ ಪ್ರೈಸಸ್ ಮೂರು ಕಾಸು ಕೂಡ ಕೊಡಬೇಕಾಗಿಲ್ಲ, ಇನ್‌ವೆಂಟರಿ ಎಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ಇರುತ್ತದೆ. ಗೌರಿಬಿದನೂರು ಸಕ್ಕರೆ ಕಾರ್ಖಾನೆಯಲ್ಲಿಯೂ

ಶೆ–೩೮ಪಿ.ಎಂ.

ಇದೆ ಹಿಂಸೆ ಇದೆ. ಮಾನ್ಯ ಸದಸ್ಯರು ಅಧಿಕಾರಿಗಳು ಸರಿಯಾಗಿ ಬೋರ್ಡ್ ಮೀಟಿಂಗಿಗೆ ಹೋಗದೇ ಇರುವುದರಿಂದ ಈ ಒಂದು ವ್ಯತ್ಯಾಸವಾಗಲಿಕ್ಕೆ ಕಾರಣವಾಗಿದೆಯೆಂದು ಹೇಳಿದರು.

ಶ್ರೀ ಕೆ.ಹೆಚ್. ರಂಗನಾಥ್.—ಸರಿಯಾಗಿ ಆಟೆಂಡ್ ಆಗಿದ್ದರೆ ಸರ್ಕಾರ ನಿಗಾವಹಿಸುವುದಕ್ಕೆ ಸಾಧ್ಯವಿರುತ್ತಿತ್ತು. ಇಲ್ಲದೇ ಹೋದರೆ ಡೈರಕ್ಟರಾಗಿ ಏಕೆ ಕಳಿಸಿದಿರಿ? ಅವರು ಮೀಟಿಂಗಿಗೆ ಹೋಗಬೇಕಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಅವರು ಎಲ್ಲಾ ಮೀಟಿಂಗ್‌ಗಳಿಗೂ ಆಟೆಂಡ್ ಮಾಡುವುದಕ್ಕೆ ಆಗಿಲ್ಲ. ೧೯೭೭ರಲ್ಲಿ ಈ ಸಂಸ್ಥೆ ಬಗ್ಗೆ ಎನ್‌ಕ್ವೈರಿಯಾಗಿದೆ, ಏನೂ ತೊಂದರೆ ಇಲ್ಲ ಎಂದು ರಿಪೋರ್ಟ್ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಅದಕ್ಕೋಸ್ಕರವೇ ನಾನು ಕೇಳಿದೆ ಯಾವುಯಾವುದಕ್ಕೆ ಖರ್ಚು ಮಾಡಿದ್ದಾರೆಂಬ ವಿವರ ಕೊಡಿ ಎಂದು. ನೀವು ವಿವರಣೆ ಆಮೇಲೆ ಕೊಡುತ್ತೇನೆಂದು ಹೇಳಿದಿರಿ. ಇನ್‌ವೆಂಟರಿ ಇಲ್ಲದೆ ಒಟ್ಟು ಇವತ್ತಿನದಿವಸ ಎಷ್ಟು ನಷ್ಟವಾಗಿದೆ ಎಂದು ಹೇಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಆರ್.ಎಲ್. ಜಾಲಪ್ಪ.—ಎರಡು ಕೋಟಿ ನಷ್ಟ ಇರಬೇಕು ಎಂದು ಕಾಣುತ್ತದೆ, ವಿವರಗಳು ನನ್ನಲ್ಲಿಲ್ಲ, ತರಿಸಿಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆ

ದಾವಣಗೆರೆ ಕುಡಿಯುವ ನೀರಿನ ವಿಸ್ತರಣಾ ಯೋಜನೆಗಾಗಿ ದೇವರ ಬೆಳೆಕೆರೆ ಜಲಾಶಯ ಬಗ್ಗೆ

೪೨೩ (೨೧) ಶ್ರೀ ಕೆ. ಹೆಚ್. ಕುರಡಗಿ (ಮಂಡರಗಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಾವಣಗೆರೆ ಕುಡಿಯುವ ನೀರಿನ ವಿಸ್ತರಣೆ ಯೋಜನೆಗಾಗಿ ದೇವರ ಬೆಳೆಕೆರೆ ಜಲಾಶಯದಲ್ಲಿ ದಿನಕ್ಕೆ ದಶಲಕ್ಷ ಗ್ಯಾಲನ್ ನೀರನ್ನು ಕಾಯ್ದಿರುಸುವಂತೆ ಬೇಡಿಕೆಗಳೇನಾದರೂ ಬಂದಿವೆಯೇ ?

ಆ) ದಾವಣಗೆರೆಗೆ ಇನ್ನೂ ೨೦ ವರ್ಷಗಳ ನಂತರ ಎಷ್ಟು ನೀರು ಬೇಕಾಗುವುದಾಗಿ ಅಂದಾಜು ಮಾಡಲಾಗಿದೆ?